ದಿನಾಂಕಃ **28.06.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿಯ ಪರ ಶ್ರೀ ಪಿ.ವಿ.ಪಿ. ವಕೀಲರಿಂದಃ

01. ನಾನೂ ಕೂಡಾ ಹಿರೇಹಡಗಲಿ ಗ್ರಾಮದ ವಾಸಿ ಎಂದರೆ ಸರಿ. ಈ ದಾವೆಯನ್ನು ಯಾರು, ಯಾರ ವಿರುದ್ಧ ಯಾವ ವಿಚಾರದ ಬಗ್ಗೆ ಸಲ್ಲಿಸಿದ್ದಾರೆಂದು ನಾನು ತಿಳಿದುಕೊಂಡಿದ್ದುಂಟೇ? ಎಂದರೆ ತಿಳಿದುಕೊಂಡಿಲ್ಲ. ದಾವೆಗೆ ತಕರಾರನ್ನು ನಾವೇ ವಕೀಲರಿಗೆ ಹೇಳಿ ಬರೆಯಿಸಿದ್ದೇವೆ. ದಾವೆಯಲ್ಲಿ ಎಷ್ಟು ಆಸ್ತಿಗಳಿವೆ ಎಂದು ನನಗೆ ಗೊತ್ತಿಲ್ಲ ಆದರೆ ಅವುಗಳು 3 ನೇ ಪ್ರತಿವಾದಿ ಅನ್ನಕ್ಕನ ಆಸ್ತಿಗಳು ಎಂದು ಮಾತ್ರ ಗೊತ್ತು . ಅನ್ನಕ್ಕನಿಗೆ ಸಂಬಂಧಪಟ್ಟ ಆಸ್ತಿಗಳು ಮೂಲತಃ ಯಾರ ಆಸ್ತಿಗಳು ಎಂಬ ಬಗ್ಗೆ ನಾನು ತಿಳಿದುಕೊಂಡಿಲ್ಲ. ನಾನು ಅನ್ನಕ್ಕನಿಂದ 5 ವರ್ಷಗಳ ಹಿಂದೆ ಕ್ರಯ ಪತ್ರದ ಮೂಲಕ ಖರೀದಿ ಮಾಡಿದ್ದೆ ನಾನು ಖರೀದಿ ಮಾಡಿದ ಆಸ್ತಿಯ ಸರ್ವೇ ನಂ. 337 ಇರುತ್ತದೆ. ಸದರಿ ಸರ್ವೇ ನಂಬರ್ ನಲ್ಲಿ ಒಟ್ಟು ಎಷ್ಟು ಆಸ್ತಿ ಇರುತ್ತದೆ ಎಂಬುದನ್ನು ನಾನು ತಿಳಿದುಕೊಂಡಿಲ್ಲ. ಸರ್ವೇ ನಂ. 337 ರಲ್ಲಿ ಉಳಿದ ಜಮೀನನ್ನು ಯಾರು ಸ್ವಾಧೀನ ಹೊಂದಿ ಸಾಗುವಳಿ ಮಾಡುತ್ತಿದ್ದಾರೆಂದು ನನಗೆ ಗೊತ್ತಿದೆಯೇ? ಎಂದರೆ ಗೊತ್ತಿಲ್ಲ. ನಾನು ಖರೀದಿ ಮಾಡಿದ ಜಮೀನುಗಳ ನಾಲ್ಕು ದಿಕ್ಕುಗಳಲ್ಲಿ ಬಾಣದ ಹನುಮಂತಪ್ಪ, ಇದ್ಲಿ ನಿಂಗಪ್ಪ, ದೇವರ ಮನೆ ಉಮಾಪತಿ ಮತ್ತು ಇದ್ಲಿ ನೀಲವ್ವ ಇವರ ಜಮೀನುಗಳು ಇರುತ್ತವೆ. ನನಗೆ ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕಿನಂತೆ ಚೆಕ್ಕುಬಂದಿ ಹೇಳಲು ಗೊತ್ತಿಲ್ಲ. ನಾನು ಕ್ರಯ ಪತ್ರದ ಪ್ರಕಾರ ಸ್ವಾಧೀನ ಹೊಂದಿ ಸಾಗುವಳಿ ಮಾಡುತ್ತಿಲ್ಲವಾದ್ದರಿಂದ ನನಗೆ ದಿಕ್ಕುಗಳ ಪ್ರಕಾರ ಚೆಕ್ಕುಬಂದಿ ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ಖರೀದಿ ಮಾಡುವ ಕಾಲಕ್ಕೆ ವಾದಿಗಳು ಸಲ್ಲಿಸಿದ್ದ ಓ.ಎಸ್. 97/2017 ವಜಾ ಆಗಿತ್ತು ಎಂದು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡುವ ಮುಂಚೆ ಈ ದಾವೆ ಓ.ಎಸ್. ನಂ. 12/2020 ರ ವಿಚಾರಣೆ ನಡೆಯುತ್ತಿದ್ದ ಬಗ್ಗೆ ತಿಳಿದುಕೊಂಡಿದ್ದುಂಟೇ? ಎಂದರೆ ಅನ್ನಕ್ಕನನ್ನು ವಿಚಾರಣೆ ಮಾಡಿದಾಗ ಆಕೆ ಯಾವುದೇ ಕೇಸು ಇಲ್ಲವೆಂದು ಹೇಳಿದ್ದರು. ಅನ್ನಕ್ಕ ನನಗೆ ಯಾವುದೇ ಕೇಸು ವಿಚಾರಣೆ ನಡೆಯುತ್ತಿಲ್ಲ ಎಂದು ಹೇಳಿದ್ದನ್ನು ನಂಬಿಯೇ ಖರೀದಿ ಮಾಡಿದ್ದೀನಾ? ಎಂದರೆ ಹೌದು.

02. ಈ ದಾವೆಯಲ್ಲಿ ನನಗೆ ಸಮನ್ಸ್ ಬಂದ ನಂತರ ನನ್ನ ವಕೀಲರನ್ನು ಭೇಟಿ ಮಾಡಿದಾಗ ನಾನು ಖರೀದಿ ಮಾಡಿದ ಕಾಲಕ್ಕೆ ದಾವೆ ನಡೆಯುತ್ತಿತ್ತೇ? ಅಥವಾ ಇಲ್ಲವೇ? ಎಂಬ ಬಗ್ಗೆ ಅವರಿಂದ ತಿಳಿದುಕೊಂಡಿದ್ದುಂಟೇ? ಎಂದರೆ ನನಗೆ ಅದೆಲ್ಲಾ ಗೊತ್ತಾಗುವುದಿಲ್ಲ. ನಾನು ತಕರಾರಿನಲ್ಲಿ ಹೇಳಿದ ಪಾಲುವಿಭಾಗಕ್ಕಿಂತ ಮುಂಚೆ ನಾನು ಖರೀದಿ ಮಾಡಿದ 2 ಎಕರೆ ಯಾರ ಹೆಸರಿನಲ್ಲಿತ್ತು ಎಂಬುದನ್ನು

ತಿಳಿದುಕೊಂಡಿದ್ದೀನಾ? ಎಂದರೆ ಇಲ್ಲ. ನಾನು ಹೇಳಿದ ಪಾಲುವಿಭಾಗ ಪತ್ರವನ್ನು ಸಣ್ಣ ಭರಮಪ್ಪನ ಮಕ್ಕಳಾದ ವಾದಿಗಳಿಗೆ ದಾವಾ ಸ್ವತ್ತುಗಳಲ್ಲಿ ಪಾಲುವಿಭಾಗ ಕೊಡಬಾರದು ಎಂದು ದೊಡ್ಡಭರಮಪ್ಪನ ಮಕ್ಕಳು ಸೃಷ್ಟಿ ಮಾಡಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಸೃಷ್ಟಿತ ಪಾಲುವಿಭಾಗ ಪತ್ರದ ಆಧಾರದ ಮೇಲೆ ವಾದಿಗಳಿಗೆ ಗೊತ್ತಾಗದಂತೆ ನನಗೆ ಮಾರಾಟ ಮಾಡಿದ್ದಾರೆ ಎಂದರೆ ಅವರ ಹೆಸರಿಗೆ ನೋಂದಣಿ ಆಗಿದ್ದರಿಂದ ನಾನು ಖರೀದಿ ಮಾಡಿದ್ದೇನೆ. ವಾದಿಗಳ ಒಟ್ಟು ಕುಟುಂಬಕ್ಕೆ ಸೇರಿದ ಆಸ್ತಿಯಾಗಿರುವ ಕಾರಣ 3 ನೇ ಪ್ರತಿವಾದಿಗೆ ಸದರಿ ಆಸ್ತಿಯನ್ನು ನನಗೆ ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಎಲ್ಲರನ್ನೂ ವಿಚಾರ ಮಾಡಿಯೇ ಖರೀದಿ ಮಾಡಿದ್ದೇನೆ ಮತ್ತು ಅಕ್ಕ-ತಂಗಿಯರು ಒಪ್ಪಿಗೆ ಕೊಟ್ಟಿದ್ದರು. ಅಕ್ಕ-ತಂಗಿಯರು ಕ್ರಯ ಪತ್ರಕ್ಕೆ ಒಪ್ಪಿಗೆ ಕೊಟ್ಟ ಬಗ್ಗೆ ಸಹಿ ಮಾಡಿದ್ದಾರೆಯೇ? ಎಂದರೆ ಅದರ ಬಗ್ಗೆ ನನ್ನ ಗಂಡನಿಗೆ ಗೊತ್ತಿದೆ, ನನಗೆ ಗೊತ್ತಿಲ್ಲ. ಈ ದಿನ ಸಾಕ್ಷಿ ಹೇಳಲು ಬರುವ ಮುಂಚೆ ಕೂಡಾ ನಾನು ಕ್ರಯ ಪತ್ರಕ್ಕೆ ಯಾರು ಯಾರು ಸಹಿ ಮಾಡಿದ್ದಾರೆಂದು ತಿಳಿದುಕೊಳ್ಳಲು ಪ್ರಯತ್ನ ಮಾಡಲಿಲ್ಲವೇ? ಎಂದರೆ ಇಲ್ಲ. ನಾನು ಖರೀದಿ ಮಾಡಿದ ದಿನಾಂಕ 09.07.2020 ಕ್ಕಿಂತ ಮುಂಚೆಯೇ ವಾದಿಗಳು ಈ ದಾವೆಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವೆ ಇರುವುದನ್ನು ಮರೆಮಾಚಿ 3 ನೇ ಪ್ರತಿವಾದಿ ನನಗೆ ಮಾರಾಟ ಮಾಡಿದ್ದಾರೆ ಎಂದರೆ ನಾನು ಅದನ್ನೆಲ್ಲಾ ವಿಚಾರ ಮಾಡಿಲ್ಲ, ಅವರ ಹೆಸರಿಗೆ ಪಹಣಿ ಮತ್ತು ದಾಖಲೆ ಇದ್ದಿದ್ದರಿಂದ ಖರೀದಿ ಮಾಡಿದ್ದೇನೆ. ವಾದಿಗಳು ಅನಕ್ಷರಸ್ಥರು ಮತ್ತು ಅಮಾಯಕರು ಎಂಬುದನ್ನು ದುರುಪಯೋಗ ಮಾಡಿಕೊಂಡು 3 ನೇ ಪ್ರತಿವಾದಿ ನನ್ನ ಜೊತೆ ಶಾಮೀಲಾಗಿ ಕ್ರಯ ಪತ್ರ ಮಾಡಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ದಾವೆ ಇರುವುದನ್ನು ಮರೆಮಾಚಿ ಸೃಷ್ಟಿ ಮಾಡಿದ ಕ್ರಯ ಪತ್ರವು ವಾದಿಗಳ ಮೇಲೆ ಬಂಧಕವಾಗುವುದಿಲ್ಲ ಎಂದರೆ ಸರಿಯಲ್ಲ. ದಾವೆಯ ಬಗ್ಗೆ ಮತ್ತು ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ತಕರಾರು ಮತ್ತು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಪತ್ರದ ಆಧಾರದ ಮೇಲೆ ನಾನು ಸ್ವಾಧೀನ ಹೊಂದದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ನಾನೇ ಸ್ವಾಧೀನ ಹೊಂದಿದ್ದೇನೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.